ಮಹಾತ್ಮೆಯೋ ಎಂದುಕೊಂಡು ಗಟ್ಟಿಮನಸು ಮಾಡಿ ಮನೆಗೆ ನಡೆದುಬಿಟ್ಟ. ಹೊಸ್ತಿಲು ದಾಟಿ ಒಳಗೆ ಹೋದ ತಕ್ಷಣ ಅತ್ತಿಗೆ 'ಅಯ್ಯೋ ಸುಮ್ಕೆ ನಿನ್ನ ಕೇಳ್ದಂಗಾತು. ಬೀರೂನಾಗೆ ರೇಷ್ಮೆ ಸೀರೆಯ ಮಡುಪುನಾಗೆ ಇಟ್ಟಿದ್ದೆ. ಸಿಕ್ತು. ನಾನೆ ಮರ್ತಿದ್ದೆ. ನನ್ನ ತಲಕಾಯಿಗಿಷ್ಟು' ಎಂದು ನುಡಿದು ತಲೆಯನ್ನು ಹೊಡೆದುಕೊಂಡಳು. ಅಣ್ಣ ದೇವರೆಡ್ಡಿ 'ನನ ತಮ್ಮು ಅಂತೋನಲ್ಲ ಅಂತ ನಿಂಕೆ ಯೇಳಿದ್ದೆ ತಾನೆ? ಸುಮ್ಕೆ ರಂಪ ಮಾಡ್ಬಿಟ್ಟೆ' ಎಂದು ನುಡಿಯುತ್ತಾ ಗಂಗಿರೆಡ್ಡಿಯ ಹತ್ತಿರ ಬಂದು 'ನೋಡೋ ಗಂಗ, ಏನೋ ನಂಜು ಟೇಮು. ಮರೆತ್ಬಿಡು. ನೋಡು, ಕೈವಾರದಾಗೆ ಒಂದೆಣ್ಣು ಐತಂತೆ. ನಾಳೀಕೆ ಹತ್ತು ಗಂಟೆಗೆ ವಲ್ಡೂವ. ಆಲವಟ್ಟದ ನರಸಿಂಹ ಬರ್‍ತಾನೆ... ಜೊತೀಕೆ' ಎಂದು ನುಡಿದು ಮಲಗಲು ಹೊರಟುಬಿಟ್ಟ. ಅಣ್ಣ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಹೇಗೆ ನಿರಾಳ ಆಗಿಬಿಡ್ತಾನೆ ಎಂದನಿಸಿತು. ಅಂದು ರಾತ್ರಿ ದಿವಾನದ ಮೇಲೆ ಹೊರಳಿದನಾದರು ನಿದ್ದೆ ಬಾರದೆ ಪದೇಪದೆ ಮಗ್ಗುಲು ಬದಲಿಸಿದ. ಅರೆ ನಿದ್ದೆಯಲ್ಲಿ ವಿಚಿತ್ರವಾದ ಕನಸುಗಳು. ಕಾಗೆ ಹಾರಿ ಬಂದು ತನ್ನ ತಲೆಯ ಮೇಲೆ ಕೂತ ಹಾಗೆ, ಊರ ಮಂದಿ ತನ್ನ ಕೈಕಾಲುಗಳನ್ನು ಕಡಿದು ಆಳದ ಕತ್ತಲೆ ಪ್ರಪಾತಕ್ಕೆ ಎಸೆದಂತೆ. ಅಲ್ಲಿಗೂ ಹಾರಿಬಂದ ಕಾಗೆ ರಕ್ತ ಒಸರುತ್ತಿರುವ ತನ್ನ ದೇಹವನ್ನು ಕುಕ್ಕಿಕುಕ್ಕಿ ತಿಂದಂತೆ, ಅಲ್ಲಿ ನರಳುತ್ತಲೇ ತಾನು ದೀಪಕಮಾಲಾ ರಾಗವನ್ನು ಅದ್ಭುತವಾಗಿ ಹಾಡಿದಂತೆ. ಆಗ ಇಡೀ ಜಗತ್ತೆ ಜಗಮಗನೆ ಬೆಳಗಿದಂತೆ, ಆಕಾಶದಿಂದ ಅಪ್ಸರೆಯೊಬ್ಬಳು ಹೊಳೆಯುತ್ತಾ ಇಳಿದು ತನ್ನನ್ನು ಎತ್ತಿಕೊಂಡು ಸ್ವರ್ಗಕ್ಕೆ ಹಾರಿದಂತೆ, ಅಲ್ಲಿ ತಾನು ಮೊದಲಿನಂತಾಗಿ ಆ ಅಪ್ಸರೆಯ ತೊಡೆಯ ಮೇಲೆ ಮಲಗಿದಂತೆ... ಹೀಗೆ ಅಸ್ಪಷ್ಟ ಪದರುಗಳಾಗಿ ಬಿಚ್ಚಿಕೊಳ್ಳುತ್ತಲಿದ್ದವು.

ಮುಂಜಾನೆ ಎದ್ದವನೆ ಹಂಡೆ ಕಾಯಿಸಿ ಸೋಪಿನ ನೊರೆಯಲ್ಲಿ ಮೈಯನ್ನು ಚನ್ನಾಗಿ ತಿಕ್ಕಿಕೊಂಡು ಸ್ನಾನ ಮಾಡಿದ. ಇದ್ದದ್ದರಲ್ಲೆ ಸ್ವಲ್ಪ ಹೊಸದಾದ ಬಟ್ಟೆಗೆ ಇಸ್ತ್ರಿ ಮಾಡಿ ಹಾಕಿಕೊಂಡು ಒಂದು ಗಂಟೆ ಮೊದಲೆ ತಯಾರಾಗಿ ಕುಳಿತ. ಇಂದಾದರು ಸಂಬಂಧ ಅಂಟಿಕೊಳ್ಳಲಿ ಸ್ವಾಮಿ ಎಂದು ಅಂದುಕೊಂಡು ಬಹಳ ಹೊತ್ತು ಕುಳಿತೇ ಇದ್ದ. ಅವನಿಗೆ ಒಂದು ಕ್ಷಣ ತಾನು ಇಂದು ನೋಡಲು ಹೋಗುತ್ತಿರುವ ಹುಡುಗಿ ಹೇಗಿರಬಹುದು ಎಂಬ ಕುತೂಹಲವೂ ಗರಿಗೆದರಿ ಬಗೆಬಗೆಯಾಗಿ ಕಲ್ಪಿಸಿಕೊಂಡು ಮುದಗೊಳ್ಳತೊಡಗಿದ. ಪ್ರತಿಸಾರಿ ಹೆಣ್ಣನ್ನು ನೋಡಲು ಹೋಗುವ ಮುಂಚೆ ಅದೇ ಭಾವದಲ್ಲೆ ಅವನ ತುಟಿಗಳು ಹಿತವಾಗಿ ಅರಳುವುದುಂಟು. ಹಾಗೆ ಮುದಗೊಂಡ ಭಾವಕ್ಕೆ ಶನಿಮಹಾತ್ಮೆ ಕಥೆಯಲ್ಲಿ ಅಲೋಲಿಕೆಯ ವರ್ಣನೆಯ ಪದ್ಯದ ಸಾಲುಗಳು ನೆನಪಾಗಿ ಮೆತ್ತಗೆ ಹಿತವಾಗಿ ಹಾಡತೊಡಗಿದ.



ಉಟ್ಟಾಳು ಪೈಟಾಣಿ ಶೀರೆಯ ತಾನೂ
ತೊಟ್ಟಾಳು ಜರತಾರಿ ಕುಪ್ಪಸವನ್ನೂ
ಇಟ್ಟಾಳು ಕುಂಕುಮ ಕಾಟೀಕೆಯನ್ನೂ
ಕಾಲಲಿ ಪೈಜಾಣ ಲೀಲೆಯಿಟ್ಟೂ

ನವರತ್ನ ಮಾಲೆಗಳ್ ಕೊರಳಲ್ಲಿ ಇಟ್ಟೂ
ಸೊಗಸಾಗಿ ಮುತ್ತಿನ ಕಂಠಿಯ ತೊಟ್ಟೂ
ಬತ್ತೀಸ ಲಕ್ಷಣ ಅವಳಿಗೆ ಉಂಟೂ
ಮತಿವಂತೆ ಬಾಲೆಯು ಶೃಂಗಾರದಿ ಹೊರಟೂ...